**<u>ದಿನಾಂಕಃ29.09.2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಶ್ರೀ. ವಿ.ಕೆ ವಕೀಲರಿಂದ ಆರೋಪಿಯ ಪರವಾಗಿ.</u>**

ಆರೋಪಿಯು ನನ್ನ ಬಳಿ 2017 ರಲ್ಲಿ ಹಣ ಕೇಳಿರುತ್ತಾರೆ. 2017 ರಲ್ಲೇ ನಾನು ಹಣವನ್ನು ನೀಡಿದ್ದು, ದಿನಾಂಕ ನೆನಪಿರುವುದಿಲ್ಲ. ಚೆಕ್ಕು 2017 ರಲ್ಲೇ ನನಗೆ ನೀಡಿದ್ದು, ನಾನು ಹಣ ಕೊಟ್ಟ ಸಮಯದಲ್ಲಿ ನನಗೆ ಚೆಕ್ ನೀಡಿರುವುದಿಲ್ಲ. ಪ್ರತ್ಯುತ್ತರದಲ್ಲಿ ಆರೋಪಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇದೆ. ಸದರಿ ಪ್ರತ್ಯುತ್ತರದಲ್ಲಿ ಎಷ್ಟು ಚೆಕ್ಕುಗಳ ಸಂಖ್ಯೆಯನ್ನು ಆರೋಪಿ ನಮೂದು ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಪ್ರತ್ಯುತ್ತರದಲ್ಲಿ ಎಷ್ಟು ಕೇಸ್‌ಗಳ ಪ್ರಕರಣಗಳ ಬಗ್ಗೆ ಆರೋಪಿ ನಮೂದು ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ.

2. ನಿಪಿಃ1 ರಲ್ಲಿ ಆರೋಪಿಯೇ ಬರೆದುಕೊಟ್ಟಿದ್ದಾರೆ. ನಿಪಿಃ1 ರಲ್ಲಿ ಸಹಿ ಮತ್ತು ಬರವಣಿಗೆಯ ಶಾಯಿಯಲ್ಲಿ ವ್ಯತ್ಯಾಸವಿದೆ ಎಂದರೆ ನನಗೆ ಗೊತ್ತಿಲ್ಲ. ಚೆಕ್ಕನ್ನು 2018 ರಲ್ಲಿ ಬ್ಯಾಂಕಿಗೆ ಹಾಜರುಪಡಿಸಿದ್ದು, ದಿನಾಂಕ ತಿಳಿದಿಲ್ಲ. ಆರೋಪಿ ನೀಡಿರುವ ಚೆಕ್ಕು ಐ.ಸಿ.ಐ.ಸಿ.ಐ ಬ್ಯಾಂಕಿನ ಆಗಿದ್ದು, ಬೆಂಗಳೂರು ಬ್ರಾಂಚಿಗೆ ಸಂಬಂಧಿಸಿರುತ್ತದೆ. ಸದರಿ ಚೆಕ್ಕು ಹಿಂದಿರುಗಿದ ದಿನಾಂಕ ನನಗೆ ತಿಳಿದಿಲ್ಲ. ಲೀಗಲ್ ನೋಟೀಸನ್ನು ಸಹ 2018 ರಲ್ಲೇ ನೀಡಿದ್ದು, ದಿನಾಂಕ ನೆನಪಿಲ್ಲ. ಆರೋಪಿ ನೀಡಿದ ಪ್ರತ್ಯುತ್ತರ ನನಗೆ ಯಾವ ದಿನಾಂಕ ತಲುಪಿದೆ ಎಂದು ನನಗೆ ಮಾಹಿತಿ ಇಲ್ಲ.

3. ಆರೋಪಿಯು ಯಲ್ಲಪ್ಪನವರ ಬಳಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರ ಪರಿಚಯದ ಕಾರಣ ನಾನು ಹಣ ನೀಡಿದ್ದೇನೆ. ಯಲ್ಲಪ್ಪನವರು ಫಾರ್ಚ್ಯೂನ್ ಕಾರನ್ನು ಖರೀದಿಸಿದಾಗ ಆರೋಪಿಯಿಂದ ಭದ್ರತೆಗಾಗಿ 3 ಚೆಕ್ಕುಗಳನ್ನು ಪಡೆದಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಅದರಲ್ಲಿ 009434, 009435 ಹಾಗೂ 009436 ಚೆಕ್ಕುಗಳು ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಯಲ್ಲಪ್ಪನವರಿಗೂ ಮತ್ತು ಆರೋಪಿಯ ನಡುವೆ ವೈಮನಸ್ಸು ಬಂದ ಕಾರಣ ಯಲ್ಲಪ್ಪನವರು ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ನನ್ನ ಮೂಲಕ, ನಾಗರಾಜ್‌ರವರ ಮೂಲಕ ಹಾಗೂ ಅವರ ಮೂಲಕವೇ ಮೂರು ಪ್ರಕರಣಗಳನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಮೂರು ಚೆಕ್ಕುಗಳು ದಿನಾಂಕ 03.04.2018 ರಂದು, 10.04.2018 ರಂದು ಹಾಗೂ 25.04.2018 ರಂದು ಕ್ರಮವಾಗಿ 10 ದಿನಗಳ ಅಂತರದಲ್ಲಿ ಅಮಾನ್ಯಗೊಳಿಸಲಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಈ ಚೆಕ್ಕಿಗೂ ಮತ್ತು ನನಗೂ

ಯಾವುದೇ ಸಂಬಂಧ ಇರದ ಕಾರಣ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರವುದಿಲ್ಲ ಎಂದರೆ ಸರಿಯಲ್ಲ. ಯಲ್ಲಪ್ಪನ ಆದೇಶದಂತೆ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಹಣ ಬರುತ್ತದೆ ಎನ್ನುವ ಕಾರಣಕ್ಕೆ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು ಹಾಗೂ
24 ನೇ ಎಸಿಎಂಎಂ, ಬೆಂಗಳೂರು.